ಅಂತರ್ಜಲ ಮಟ್ಟ

1295(1401); ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ

ಅ) ತುಮಕೂರು ಜಿಲ್ಲೆಯಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಅಂತರ್ಜಲ ವೃದ್ಧಿಗೆ ಹಮ್ಮಿಕೊಂಡ ಕಾರ್ಯಕ್ರಮಗಳೇನು;

ಆ) ಮೇಲ್ಕಂಡ ಇಲಾಖಾ ವತಿಯಿಂದ ಅಂತರ್ಜಲ ಮಟ್ಟ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡುವ ಕಾರ್ಯಕ್ರಮಗಳು ನಡೆಯುತ್ತಿದೆಯೇ (ವಿವರ ನೀಡುವುದು)?

ಶ್ರೀ ಶಿವರಾಜ್ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು)

ಅ) ತುಮಕೂರು ಜಿಲ್ಲೆಯ ಹಿರಿಯ ಭೂವಿಜ್ಞಾನಿ, ಜಿಲ್ಲಾ ಪಂಚಾಯತ್ ಕಛೇರಿಯಿಂದ ಅಂತರ್ಜಲವನ್ನು ಅಭಿವೃದ್ಧಿಪಡಿಸಲು ಅಂತರ್ಜಲ ಕೃತಕ ಮರುಪೂರ್ಯೆಕೆ ರಚನೆಯಾದ ಚೆಕ್‌ಡ್ಯಾಂ ನಿರ್ಮಾಣದ ಸಂಬಂಧ site Specific ಸ್ಥಳಾಯ್ಕೆ ಮಾಡಿ ಕಾರ್ಯನಿರ್ವಾಹಕ ಅಭಿಯಂತರರು ಸಣ್ಣ ನೀರಾವರಿ ಇಲಾಖೆ ರವರ ಮುಖಾಂತರ ನಿರ್ಮಿಸಲಾಗುತ್ತಿದೆ.

2013-14ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯಲ್ಲಿ ಅಂತರ್ಜಲ ಕೃತಕ ಮರು ಪೂರ್ಯೆಕೆ ರಚನೆಯ ನಿರ್ಮಾಣದ ವಿವರವನ್ನು ಈ ಕೆಳಗಿನಂತೆ ನೀಡಿದೆ.

ಚೆಕ್‌ಡ್ಯಾಂಗಳ ವಿವರ

ಕ್ರ.ಸಂ	ಜಿಲ್ಲೆ	ತಾಲ್ಲೂಕು	ಚೆಕ್ ಡ್ಯಾಂಗಳ ಸಂಖ್ಯೆ	ಚೆಕ್ ಡ್ಯಾಂ ನಿರ್ಮಾಣದ ವಿವರ	ಅನುದಾನ (₹ ಲಕ್ಷಗಳಲ್ಲಿ)
1.	ತುಮಕೂರು	ಕೊರಟಗೆರೆ	1	ಬುಕ್ಕಾಪಟ್ಟಣ	2.50
2.			1	ಘಟ್ಟಲಹಳ್ಳಿ	2.50

ಆ) ಇಲಾಖಾ ವತಿಯಿಂದ ಅಂತರ್ಜಲಮಟ್ಟ ಸಂರಕ್ಷಣೆ, ಸದ್ಬಳಕೆ ಮತ್ತು ಅಂತರ್ಜಲ ಗುಣಮಟ್ಟ ಕುರಿತು ತಾಲ್ಲೂಕು ಮಟ್ಟದಲ್ಲಿ ಸಾರ್ವಜನಿಕರಿಗೆ ಹಾಗೂ ಶಾಲಾ ಕಾಲೇಜುಗಳಲ್ಲಿ ಜನಜಾಗೃತಿ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ.

2013–14ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯಲ್ಲಿ 3 ಜನ ಜಾಗೃತಿ ಶಿಬಿರಗಳನ್ನು ಶಾಲಾ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದು 1 ತಾಲ್ಲೂಕು ಮಟ್ಟದಲ್ಲಿ ಜನಜಾಗೃತಿ ಶಿಬಿರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿರುತ್ತದೆ. ಈ ಕಾರ್ಯಕ್ರಮಗಳ ವಿವರ ಕೆಳಕಾಣಿಸಿದಂತಿದೆ.

ಹಮ್ಮಿಕೊಳ್ಳಲಾದ ಜನಜಾಗೃತಿ ಶಿಬಿರದ ವಿವರ

ಕ್ರ ಸಂ	ಜಿಲ್ಲೆ	ತಾಲ್ಲೂಕು	ಜನಜಾಗೃತಿ ಶಿಬಿರಗಳ ಸಂಖ್ಯೆ	ಜನಜಾಗೃತಿ ಶಿಬಿರಗಳ ವಿವರ	ಅನುದಾನ (₹ ಗಳಲ್ಲಿ)
1.	ತುಮಕೂರು	ಕುಣಿಗಲ್	1	ಭಕ್ತರಹಳ್ಳಿ ಸರ್ಕಾರಿ ಪ್ರೌಢ ಶಾಲೆ	30,000/–
2.		ತುಮಕೂರು	1	ಸಿರಿವಾರ ಸರ್ಕಾರಿ ಪ್ರೌಢ ಶಾಲೆ	30,000/–
3.		ಪಾವಗಡ	1	ಪಾವಗಡ ಟೌನ್‌ನ ಸರ್ಕಾರಿ ಪ್ರೌಢ ಶಾಲೆ	30,000/–
4.		ಕೊರಟಗೆರೆ	1	ತಾಲ್ಲೂಕು ಮಟ್ಟದಲ್ಲಿ	60,000/–